

ನಮ್ಮಂತ ಪಟಗಾರರು ಬಂದು ಉಳಿಯಲಿದ್ದ ಕಿರು ಮನೆಗಳವು. ಹಸಿರು ಹುಲ್ಲಿನ ಹೊರೆ ಎತ್ತಿ ಬಿಸಾಕಿ ಆತ ನಾನೇ ಎಲ್ಡೋಸ್ ಹೇಳಿ ಎಂದ. ನಾನು ಬೆಪ್ಪಾಗಿ ನಿಂತೆ. ನಾವು ಕಲ್ಪನೆ ಮಾಡಿಕೊಂಡಿದ್ದ ಮನುಷ್ಯನಿಗಿಂತ ಈತ ವಿಭಿನ್ನನಾಗಿದ್ದ.

ನಾವು ಬಹಳಷ್ಟು ಮನುಷ್ಯನ ವೇಷಭೂಷಣ, ನಡೆಸುವ ವಾಹನ ನೋಡಿ ಯೋಗ್ಯತೆ ಅಳೆಯುತ್ತೇವೆ. ಇದೊಂದು ದೊಡ್ಡ ಮೂರ್ಖತನ ಎಂಬುದೇ ನನ್ನ ಭಾವನೆ. ಎಲ್ಡೋಸ್ ತಕ್ಕಮಟ್ಟಿಗೆ ಶ್ರೀಮಂತನಾದರೂ ಸಾಮಾನ್ಯ ಕೂಲಿಯಂತೆ ಕಾಣುತ್ತಿದ್ದ. ಮಾತು ಕಮ್ಮಿ, ನಗುವಿಲ್ಲ. ಸಣ್ಣ ಸಲುಗೆಯೂ ಇಲ್ಲ. ವ್ಯವಹಾರದಲ್ಲಿ ಮಾತ್ರ ಹಟವಾದಿ. ಒಂದು ರೂಪಾಯಿ ಕಡಿಮೆ ಕೊಟ್ಟರೂ ನಾನು ಒಪ್ಪುವುದಿಲ್ಲ ಎಂದು ಮೊದಲೇ ಹೇಳಿದ. ಕೇಳಿದ ಪ್ರಶ್ನೆಗಳಿಗಷ್ಟೇ ಒಂದು ವಾಕ್ಯದ ಉತ್ತರ. ರಾತ್ರಿಗೆ ಆತನ ಪತ್ನಿ ಮಾಡಿಟ್ಟಿದ್ದ ಊಟವನ್ನೂ ಅವನೇ ನಿಂತು ಬಡಿಸಿ, ತಟ್ಟೆ ಎತ್ತಿಟ್ಟ.

ಬೆಳಗ್ಗೆ ಆರು ಗಂಟೆಗೆ ರೆಡಿ ಇರಿ ಎಂದು ಹೇಳಿ ನಾವಿರಬೇಕಾದ ಕಾಟೇಜ್ ತೋರಿಸಿ ಹೊರಟು ಹೋದ. ಅದೇನೂ ಮಾಯೆಯೋ ಗೊತ್ತಿಲ್ಲ ಅವನ ಮನೆ ಮುಂದೆ ಅನೇಕ ಬಗೆಯ ಪಕ್ಷಿಗಳು ಬರುತ್ತಿದ್ದವು. ಆತ ಅವಕ್ಕೆ ಹಣ್ಣುಗಳ ಉಣಿಸಿ ಅಭ್ಯಾಸ ಮಾಡಿಸಿದ್ದ. ಒಂದೊಂದು ಪಕ್ಷಿಗಳ ಪಟ ತೆಗೆಯಲು ಆತನೊಂದು